**ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**
**ಮತ್ತು**
**ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಮಂಡಳಿ**

# ಪತ್ರಿಕಾ ಪ್ರಕಟಣೆ

## ಸರ್. ಎಂ. ವಿಶ್ವೇಶ್ವರಯ್ಯ, ಡಾ. ರಾಜಾರಾಮಣ್ಣ, ಸರ್. ಸಿ.ವಿ ರಾಮನ್, ಪ್ರೊ. ಸತೀಶ್ ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿಗಳು – 2019

ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ , ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ವಿಜ್ಞಾನಿ ಮತ್ತು ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಲು ಪ್ರಖ್ಯಾತ ವಿಜ್ಞಾನಿಗಳಾದ ಸರ್. ಎಂ ವಿಶ್ವೇಶ್ವರಯ್ಯ, ಡಾ. ರಾಜರಾಮಣ್ಣ, ಸರ್. ಸಿ.ವಿ. ರಾಮನ್, ಪ್ರೊ. ಸತೀಶ್‌ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಅವರ ಹೆಸರಿನಲ್ಲಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ.

ಸರ್ಕಾರವು ಈ ಪ್ರಶಸ್ತಿಗಳಿಗೆ ಅರ್ಹ ವಿಜ್ಞಾನಿ ಮತ್ತು ಇಂಜಿನಿಯರುಗಳ ಆಯ್ಕೆಗಾಗಿ ಹೆಸರಾಂತ ವಿಜ್ಞಾನಿಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಗೆ (KSCST) ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿರುತ್ತದೆ.

**ಸರ್. ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ರಾಜ್ಯ ಪ್ರಶಸ್ತಿ:** ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಅಭಿವೃದ್ಧಿಗಾಗಿ ತಮ್ಮ ಜೀವನಾವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಇಬ್ಬರು ಹಿರಿಯ ವಿಜ್ಞಾನಿ/ಇಂಜಿನಿಯರ್‌ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಈ ಪ್ರಶಸ್ತಿಯು ರೂ. 2,00,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಡಾ. ರಾಜಾರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ:** ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ / ವಿಜ್ಞಾನದ ಇತಿಹಾಸ ಮತ್ತು ತತ್ವಜ್ಞಾನ / ವಿಜ್ಞಾನ ಮತ್ತು ಸಮಾಜ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇಬ್ಬರು ಹಿರಿಯ ವಿಜ್ಞಾನಿ / ಇಂಜಿನಿಯರ್‌ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಈ ಪ್ರಶಸ್ತಿಯು ರೂ. 1,50,000/-ನಗದು , ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಸರ್. ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ:** ಈ ಪ್ರಶಸ್ತಿಗಳನ್ನು ರಾಜ್ಯದ ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸಲು, ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಈ ಕೆಳಕಂಡ ಐದು ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

- ಭೌತ ವಿಜ್ಞಾನ ಮತ್ತು ಗಣಿತಶಾಸ್ತ್ರ
- ರಾಸಾಯನ ವಿಜ್ಞಾನ
- ಜೀವ ವಿಜ್ಞಾನ
- ವೈದ್ಯಕೀಯ ವಿಜ್ಞಾನ
- ಕೃಷಿ ವಿಜ್ಞಾನ ಮತ್ತು ಪಶುಸಂಗೋಪನೆ

**ಪ್ರೊ. ಸತೀಶ್‌ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ:** ಈ ಪ್ರಶಸ್ತಿಗಳನ್ನು ರಾಜ್ಯದ ಯುವ ಇಂಜಿನಿಯರುಗಳನ್ನು ಪ್ರೋತ್ಸಾಹಿಸಲು ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಇಂಜಿನಿಯರಿಂಗ್ ವಿಜ್ಞಾನ ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

**ಡಾ. ಕಲ್ಪನಾಚಾವ್ಲಾ ಮಹಿಳಾ ಯುವ ವಿಜ್ಞಾನಿ ಪ್ರಶಸ್ತಿ:** ಈ ಪ್ರಶಸ್ತಿಗ ರಾಜ್ಯದ ಯುವ ಮಹಿಳಾ ವಿಜ್ಞಾನಿ / ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಲು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಪ್ರತಿವರ್ಷ ಒಬ್ಬ ಮಹಿಳಾ ಯುವ ವಿಜ್ಞಾನಿ / ಇಂಜಿನಿಯರ್‌ಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

ಸರ್. ಸಿ.ವಿ. ರಾಮನ್, ಪ್ರೊ. ಸತೀಶ್‌ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಪ್ರಶಸ್ತಿಗಳು ರೂ. 1,00,000/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತವೆ.

2019 ನೇ ಸಾಲಿನ ಪ್ರಶಸ್ತಿಗಳಿಗಾಗಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಜನವರಿ 2020 ರಂದು ನಾಮಪತ್ರಗಳನ್ನು ಆಹ್ವಾನಿಸಿದ್ದು, ಒಟ್ಟು 160 ವಿಜ್ಞಾನಿ ಮತ್ತು ಇಂಜಿನಿಯರ್ ಗಳು ನಾಮಪತ್ರಗಳನ್ನು ಸಲ್ಲಿಸಿರುತ್ತಾರೆ. ಡಾ. ಎ.ಎಸ್. ಕಿರಣ್ ಕುಮಾರ್, ವಿಶ್ರಾಂತ ಅಧ್ಯಕ್ಷರು, ಇಸ್ರೋ ಇವರ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿದ ಆಯ್ಕೆ ಸಮಿತಿಯು 13 ವಿಜ್ಞಾನಿ ಮತ್ತು ಇಂಜಿನಿಯರ್ ಗಳನ್ನು ಪ್ರಶಸ್ತಿಗಳಿಗಾಗಿ ಆಯ್ಕೆಮಾಡಿರುತ್ತದೆ.

2019 ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ 11-03-2022 ಶುಕ್ರವಾರ ಸಂಜೆ 4.30 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಬಸವರಾಜ ಎಸ್. ಬೊಮ್ಮಾಯಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಭಾರತ ರತ್ನ ಪ್ರೊ. ಸಿ.ಎನ್.ಆರ್. ರಾವ್, FRS, ಲಿನಸ್ ಪೌಲಿಂಗ್ ರಿಸರ್ಚ್ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ವಿಜ್ಞಾನ ಮತ್ತು ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ, ಮತ್ತು ಡಾ. ಸಿ. ಎನ್. ಅಶ್ವಥ್ ನಾರಾಯಣ, ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಇತರೆ ಗಣ್ಯರು ಉಪಸ್ಥಿತರಿರುತ್ತಾರೆ.

(ಹೆಚ್ಚಿನ ವಿವರಗಳನ್ನು ವೆಬ್‌ಸೈಟ್‌ನಲ್ಲಿ www.kscst.org.in or www.kscst.iisc.ernet.in ಪಡೆಯಬಹುದು.)

## 2019 ನೇ ವರ್ಷದ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ ಪುರಸ್ಕೃತರ ಪಟ್ಟಿ

### ಸರ್. ಎಮ್. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಡಾ. ಬೆಂಗಳೂರು ಎನ್. ಗಂಗಾಧರ್**<br>ನಿರ್ದೇಶಕರು ಮತ್ತು<br>ಹಿರಿಯ ಮನೋವೈದ್ಯಶಾಸ್ತ್ರದ ಪ್ರಾಧ್ಯಾಪಕರು,<br>ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಬೆಂಗಳೂರು | ವಿಜ್ಞಾನ ಮತ್ತು ತಂತ್ರಜ್ಞಾನ |  |
| **ಪ್ರೊ. ಗೈತಿ ಹಾಸನ್**<br>ಎಸ್‌ಇಆರ್‌ಬಿ – ಡಿಸ್ಟಿಂಗ್ವಿಷ್ಡ್ ಫೆಲೋ<br>ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ,<br>ಟಿ.ಐ.ಎಫ್. ಆರ್, ಬೆಂಗಳೂರು. | ವಿಜ್ಞಾನ ಮತ್ತು ತಂತ್ರಜ್ಞಾನ |  |

## ಡಾ. ರಾಜಾ ರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಲಲಿತ್ ಮೋಹನ್ ಪಾಟ್ನಾಯಕ್**<br>ಪ್ರಾಧ್ಯಾಪಕರು, ಮತ್ತು<br>ಐ.ಎನ್.ಎಸ್.ಎ ಗೌರವ ವಿಜ್ಞಾನಿ,<br>ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ<br>ಬೆಂಗಳೂರು. | ವಿಜ್ಞಾನ ಶಿಕ್ಷಣ |  |
| **ಪ್ರೊ. ಶೆಟ್ಟಿ ಹುಂತ್ರಿಕೆ ಶೇಖರ್**<br>ಜೀವಮಾನ ಗೌರವ ವಿಶೇಷ ಪ್ರಾಧ್ಯಾಪಕರು,<br>ಜೈವಿಕ ತಂತ್ರಜ್ಞಾನದ ಅಧ್ಯಯನ ವಿಭಾಗ,<br>ಡೌನಿ ಶಿಲೀಂಧ್ರ ಸಂಶೋಧನಾ ಪ್ರಯೋಗಾಲಯ,<br>ಮೈಸೂರು ವಿಶ್ವವಿದ್ಯಾಲಯ, ಮೈಸೂರು | ವಿಜ್ಞಾನ ಶಿಕ್ಷಣ |  |

## ಸರ್ ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಎಚ್. ನಾಗಾಭೂಷಣ್**<br>ಪ್ರಾಧ್ಯಾಪಕರು,, ಭೌತಶಾಸ್ತ್ರ ವಿಭಾಗ<br>ತುಮಕೂರು ವಿಶ್ವವಿದ್ಯಾಲಯ<br>ತುಮಕೂರು. | ಭೌತ ವಿಜ್ಞಾನ |  |
| **ಡಾ. ಜಿ. ವೆಂಕಟಸುಬ್ರಮಣ್ಯನ್**<br>ಪ್ರಾಧ್ಯಾಪಕರು, ಮನೋವೈದ್ಯಶಾಸ್ತ್ರ ವಿಭಾಗ, ರಾಷ್ಟ್ರೀಯ<br>ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ,<br>ಬೆಂಗಳೂರು. | ವೈದ್ಯಕೀಯ<br>ವಿಜ್ಞಾನ |  |
| **ಪ್ರೊ. ರವಿ ಮಂಜಿತಾಯ**<br>ಸಹ ಪ್ರಾಧ್ಯಾಪಕರು,<br>ಅಣ್ವಿಕ ಜೀವಶಾಸ್ತ್ರ ಮತ್ತು ಜೆನೆಟಿಕ್ಸ್ ಘಟಕ<br>ನರ ವಿಜ್ಞಾನ ಘಟಕ, ಜವಹರಲಾಲ್ ನೆಹರು ಉನ್ನತ<br>ವೈಜ್ಞಾನಿಕ ಸಂಶೋಧನ ಕೇಂದ್ರ, ಬೆಂಗಳೂರು. | ಜೀವ ವಿಜ್ಞಾನ |  |
| **ಡಾ. ದಿನೇಶ್ ಎ. ನಾಗೇಗೌಡ**<br>ಹಿರಿಯ ಪ್ರಧಾನ ವಿಜ್ಞಾನಿ<br>ಸಿಎಸ್ಐಆರ್-ಸಿಐಎಮ್ಎಪಿ ಸಂಶೋಧನ ಕೇಂದ್ರ ಜಿಕೆವಿಕೆ,<br>ಬೆಂಗಳೂರು. | ಕೃಷಿ ವಿಜ್ಞಾನ<br>ಮತ್ತು<br>ಪಶುಸಂಗೋಪನೆ |  |

## ಪ್ರೊ. ಸತೀಶ್ ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಆರ್. ವೆಂಕಟೇಶ್ ಬಾಬು**<br>ಸಹ ಪ್ರಾಧ್ಯಾಪಕರು,<br>ಕಂಪ್ಯೂಟೇಶನಲ್ ಮತ್ತು ಡಾಟಾ ಸೈನ್ಸ್ ವಿಭಾಗ<br>ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು | ಇಂಜಿನಿಯರಿಂಗ್ ವಿಜ್ಞಾನ |  |
| ಪ್ರೊ. ರಾಜ ಮೋಹನ್ ಬಾಲಕೃಷ್ಣನ್<br>ಪ್ರಾಧ್ಯಾಪಕರು,<br>ರಾಸಾಯನಿಕ ಇಂಜಿನಿಯರಿಂಗ್ರ ವಿಭಾಗ<br>ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ,<br>ಸುರತ್ಕಲ್, ಮಂಗಳೂರು. | ಇಂಜಿನಿಯರಿಂಗ್ ವಿಜ್ಞಾನ |  |
| **ಪ್ರೊ. ವಿನೋದ್ ಗಣಪತಿ**<br>ಸಹ ಪ್ರಾಧ್ಯಾಪಕರು,<br>ಕಂಪ್ಯೂಟರ್ ಸೈನ್ಸ್ ಅಟೋಮೇಷನ್ ವಿಭಾಗ<br>ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು. | ಇಂಜಿನಿಯರಿಂಗ್ ವಿಜ್ಞಾನ |  |
| **ಡಾ. ಹರ್ಷವರ್ಧನ್**<br>ಪ್ರಾಧ್ಯಾಪಕರು,<br>ಗಣಿಕಾರಿಕೆ ಇಂಜಿನಿಯರಿಂಗ್ ವಿಭಾಗ,<br>ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ,<br>ಸುರತ್ಕಲ್, ಮಂಗಳೂರು. | ಇಂಜಿನಿಯರಿಂಗ್ ವಿಜ್ಞಾನ |  |

## ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಡಾ. ಮಳಲಿ ಸಂಪೂರ್ಣ**<br>ಸಹ ಪ್ರಾಧ್ಯಾಪಕರು,<br>ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ<br>ಬೆಂಗಳೂರು. | ವಿಜ್ಞಾನ ಮತ್ತು ತಂತ್ರಜ್ಞಾನ |  |